# ಮನೆ ಕಟ್ಟಡದ ಅನುಮತಿ ಪತ್ರ

ಸಂಖ್ಯೆ : ಗ್ರಾಅಪ/788/ಗ್ರಾಪಂ.ಆ/2014 ದಿನಾಂಕ 08-05-2015

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ

ನಂ. 35 ತಾ|| 1/08/2023

ಹುಲಿಮಂಗಲ ಗ್ರಾಮ ಪಂಚಾಯಿತಿ ಕಛೇರಿಯಿಂದ

ಜಿಗಣಿ ಹೋಬಳಿ ಮಾರಗೊಂಡನಹಳ್ಳಿ ಗ್ರಾಮದ

ಶ್ರೀನಿಧಿ ಡೆವಲಪರ್ಸ್ ಇವರ ಪರವಾಗಿ, B. ವೆಂಕಟರತ್ನಂ ಗೆ

ನಿಮ್ಮ ——— ನೇ ಮರ್ಚ್ಕಂನ ಮನೆ ಕಟ್ಟುವ ಅನುಮತಿ ಅರ್ಜಿ ಬಾಬ್ತು

283/79/2/79/3 ನಂಬರಿನಲ್ಲಿ ಈ ಕೆಳಗೆ ಕಂಡ ಷರತ್ತುಗಳಿಗೆ ಒಟ್ಟಪಟ್ಟು ಮನೆ ಕಟ್ಟಿಕೊಳ್ಳಲು ಅಪ್ಪಣೆ ಮಾಡಿದೆ

## ಮನೆ ಕಟ್ಟುವ ಜಾಗಕ್ಕೆ ಚೆಕ್ಕುಬಂದಿ

ಪೂರ್ವ 40 Ft ರಸ್ತೆ ಪಶ್ಚಿಮ Sy.No: 80 [illegible]

ಉತ್ತರ Sy.No: 79/1 ಹಾಗೂ Sy.No: 79/4 & 79/10 ದಕ್ಷಿಣ Sy.No: 79 ಹಾಗೂ Sy.No: 79/8

ವಾಯಿದೆ ಮುಗಿಯುವ ತಾ|| 1/08/2024

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಹುಲಿಮಂಗಲ ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು.
ಬೆಂಗಳೂರು ನಗರ ಜಿಲ್ಲೆ

ರಸೀ: 01442 - 269848 = ರೂ
1/08/2023

## ಷರತ್ತುಗಳು

(1) ವಾಸಯೋಗ್ಯ ಕೊಠಡಿಗಳು : 120 ಚ.ಮೀ. ಪ್ಲಾಟ್‌ನ ಅಳತೆಗಳಿಗೆ ಸಂಬಂಧಿಸಿದಂತೆ ವಾಸಯೋಗ್ಯ ಕೊಠಡಿಗಳು 8.0 ಚ.ಮೀ. ಗಿಂತ ಕಡಿಮೆ ಇಲ್ಲದ ನೆಲ ಪ್ರದೇಶವನ್ನು ಹೊಂದಿರತಕ್ಕದ್ದು ಮತ್ತು ಕೊಠಡಿಯ ಕನಿಷ್ಠ ಅಗಲವು 2.4 ಮೀಟರುಗಳಷ್ಟಿರತಕ್ಕದ್ದು. ದೊಡ್ಡ ಪ್ಲಾಟುಗಳಿಗಾಗಿ, ವಾಸಯೋಗ್ಯ ಕೊಠಡಿಗಳ ಕನಿಷ್ಠ ಗಾತ್ರವು 9.5 ಚ.ಮೀ.ಗಳಷ್ಟಿರತಕ್ಕದ್ದು. (2) ಅಡುಗೆ ಕೋಣೆ : ಅಡುಗೆ ಕೋಣೆಯ ವಿಸ್ತೀರ್ಣವೂ ಕನಿಷ್ಠ 1.8 ಮೀ ಅಗಲದೊಂದಿಗೆ 5.5 ಚ.ಮೀಗಿಂತ ಕಡಿಮೆ ಇರತಕ್ಕದ್ದಲ್ಲ. ಮನೆಯಲ್ಲಿ ಪ್ರತ್ಯೇಕವಾದ ಉಗ್ರಾಣ ಇರುವಲ್ಲಿ, ಅಡುಗೆ ಕೋಣೆಯ ಗಾತ್ರವನ್ನು 4.5 ಚ.ಮೀ.ಗೇ ಇಳಿಸಬಹುದು. ಅಡುಗೆ ಕೋಣೆಯನ್ನು ಊಟ ಮಾಡುವ ಕೊಠಡಿಯಾಗಿ ಬಳಸಲು ಉದ್ದೇಶಿಸಿರುವಲ್ಲಿ, ಅದು 2.4ಮೀ. ಕನಿಷ್ಠ ಅಗಲದೊಂದಿಗೆ 10 ಚ.ಮೀಗಿಂತ ಕಡಿಮೆ ಇಲ್ಲದ ನೆಲ ಪ್ರದೇಶವನ್ನು ಹೊಂದಿರತಕ್ಕದ್ದು. (3) ಸ್ನಾನ ಕೋಣೆಗಳು ಮತ್ತು ವಾಟರ್ ಕ್ಲಾಸೆಟ್ಟುಗಳು : ಸ್ನಾನಕೋಣೆಯ ಗಾತ್ರವು, 1.2ಮೀ ಕನಿಷ್ಠ ಅಗಲದೊಂದಿಗೆ 1.8 ಚ.ಮೀ.ಗಿಂತ ಕಡಿಮೆ ಇರತಕ್ಕದ್ದಲ್ಲ. ವಾಟರ್ – ಕ್ಲಾಸೆಟ್‌ನ ನೆಲಗಟ್ಟು ಕನಿಷ್ಠ 0.9 ಮಿ ಅಗಲವಿದ್ದು 1.1 ಚ.ಮೀ. ವಿಸ್ತೀರ್ಣವನ್ನು ಹೊಂದಿರಬೇಕು. (4) ನಡಂತಸ್ತು : ನಡಂತಸ್ತು ಲಿವಿಂಗ್ ರೂಂನಂತೆ ಬಳಕೆ ಮಾಡುವಂತಿದ್ದರೆ ಅದರ ಕನಿಷ್ಠ ಅಳತೆಯ 8.0 ಚ.ಮೀ. ಆಗಿರತಕ್ಕದ್ದು. ಅಂಥ ನಡಂತಸ್ತಿನ ಒಟ್ಟು ವಿಸ್ತೀರ್ಣವು ಕಟ್ಟಡದ ಪ್ಲಿಂತ್ ಏರಿಯಾ ವಿಸ್ತೀರ್ಣದ ಶೇ. 33.3 ರಷ್ಟಿರಬೇಕು. (5) ಅಟ್ಟ : ಅಡುಗೆ ಮನೆ ಮತ್ತಿತರ ವಾಸಯೋಗ್ಯ ಸ್ಥಳಗಳಲ್ಲಿ ಅಟ್ಟಗಳಿಗೆ ಸ್ಥಳಾವಕಾಶ ಕಲ್ಪಿಸಲಗಿದದರೆ, ಅವುಗಳ ಗರಿಷ್ಠ ವ್ಯಾಪ್ತಿಯನ್ನು ಕೊಠಡಿ ಅಳತೆಯ ಶೇ.25 ರಷ್ಟು ಭಾಗದ ವಿಸ್ತೀರ್ಣಕ್ಕೆ ಸೀಮಿತಗೊಳಿಸತಕ್ಕದ್ದು, ಮೊಗಸಾಲೆಗಳು, ವಾಟರ್–ಕ್ಲಾಸೆಟ್‌ಗಳು ಮತ್ತು ಸ್ನಾನ ಗೃಹಗಳಲ್ಲಿ ಅಟ್ಟಗಳಿಗೆ ನೂರಕ್ಕೆ ನೂರರಷ್ಟು ಸ್ಥಳಾವಕಾಶ ಕಲ್ಪಿಸಲಾಗಿದ್ದರೆ. (6) ವಿಶೇಷ ವಸತಿ ಯೋಜನೆಗಳು : ಪ್ರಾಧಿಕಾರವು, ಸಾರ್ವಜನಿಕ ಏಜೆನ್ಸಿಯ ಮೂಲಕ ಕೈಗೆತ್ತಿಕೊಂಡಿರುವ ಕಡಿಮೆ ಆದಾಯವುಳ್ಳ ಸಮೂಹ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಸಮಾಜದ ದುರ್ಬಲ ವರ್ಗದವರಿಗಾಗಿನ ವಸತಿಯೋಜನೆಗಳ ವಾಸದ ಕಟ್ಟಡಗಳು ಮತ್ತು ಗ್ರಾಮಠಾಣಾ ಪ್ರದೇಶದಲ್ಲಿ ಈ ಮೊದಲೇ ನಿರ್ಮಿಸಿರುವ ವಾಸಯೋಗ್ಯ ಕಟ್ಟಡಗಳು / ತಡಿಕೆ / ಮಣ್ಣಿನ / ಹೆಂಚಿನ ಮನೆಗಳ ಕನಿಷ್ಠ ಖಾಲಿ ಜಾಗ, ಅಳತೆ, ವಿಸ್ತೀರ್ಣ ಮತ್ತು 19.1ರ ಅಡಿಯಲ್ಲಿ ನೀಡಲಾದ ಎತ್ತರದ ಅಗತ್ಯತೆಗಳನ್ನು 22.1.1 ರಿಂದ 22.1.3ಕ್ಕೆ ಹಾಗೂ 22.2.1 ರಿಂದ 22.2.3ಕ್ಕೆ ಸಡಿಲಗೊಳಿಸಬಹುದಾಗಿದೆ. (ಅ) ಎತ್ತರದ ಅಗತ್ಯತೆಗಳು : ವಾಸಯೋಗ್ಯಕೊಠಡಿಗಳ ಮಾನವ ವಾಸಕ್ಕಾಗಿ ಬಳಕೆ ಮಾಡುವ ಎಲ್ಲಾ ಕೊಠಡಿಗಳ ಎತ್ತರವು ನೆಲಹಾಸು ಮೇಲ್ಮೈಯಿಂದ ಮೇಲ್ಚಾವಣಿಯ ಅತ್ಯಂತ ಕೆಳಮಟ್ಟದ ಜಾಗದವರೆಗೆ (ಸ್ಲ್ಯಾಬ್‌ನ

ಪು.ತಿ.ನೋ. P.T.O

ತಳಭಾಗ) ಅಳತೆ ಮಾಡಿದರೆ2.75 ಮೀ ಇರತಕ್ಕದ್ದು, ತೊಲೆಗಳಿಗೆ ಸ್ಥಳಾವಕಾಶ ಕಲ್ಪಿಸಿದ್ದರೆ, ಕನಿಷ್ಠ ಹೆಡ್ ರೂ. (Head Room) 2.4 ಮೀ ಇರತಕ್ಕದ್ದು. (ಆ) ಅಡುಗೆಮನೆ : ಅಡುಗೆ ಕೋಣೆಯ ಎತ್ತರವು 2.75 ಮೀಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ತೊಲೆಗಳನ್ನು ಹಾಕಲಾಗಿರುವುದಲ್ಲಿ ಹೆಡ್ ರೂಂ ಕನಿಷ್ಠ 2.4 ಮೀ ಇರತಕ್ಕದ್ದು. (ಇ) ಸ್ನಾನದ ಮನೆ ಮತ್ತು ವಾಟರ್ ಕ್ಲಾಸೆಟ್‌ಗಳು : ಸ್ನಾನದ ಮನೆ ಅಥವಾ ವಾಟರ್ ಕ್ಲಾಸೆಟ್ ನ ಎತ್ತರವು ನೆಲಹಾಸು ಮೇಲ್ಮೈಯಿಂದ ಮೇಲ್ಛಾವಣಿಯ ಅತ್ಯಂತ ಕೆಳಮಟ್ಟದ ಜಾಗದವರೆಗೆ ಅಳತೆ ಮಾಡಿದರೆ 2.2 ಮೀ ಗಿಂತ ಕಡಿಮೆ ಇರತಕ್ಕದ್ದಲ್ಲ. (ಈ) ಅಟ್ಟ : ಅಟ್ಟದ ಹೆಡ್ ರೂಂ. 1.5 ಮೀ ಗಿಂತ ಹೆಚ್ಚಿಗೆ ಇರತಕ್ಕದ್ದಲ್ಲ. (ಉ) ಮೆಟ್ಟಿಲು : ಮೆಟ್ಟಿಲಿರುವ ಸ್ಥಳದ ಕೆಳಗಿನ ಸಂದಿಯಲ್ಲಿರುವ ಕನಿಷ್ಠ ಹೆಡ್ ರೂಂ 2.2 ಮೀ ಇರತಕ್ಕದ್ದು. (7) ಕೈಗಾರಿಕಾ ಕಟ್ಟಡ : ಕೊಠಡಿಯ ಕನಿಷ್ಠ ಎತ್ತರ 3.6 ಮೀಗಿಂತ ಕಡಿಮೆ ಇರತಕ್ಕದ್ದಲ್ಲ. (8) ಕಟ್ಟಡದ ಭಾಗಗಳ ಇತರೆ ಅಗತ್ಯತೆಗಳು : (ಅ) ಅಡುಗೆ ಮನೆ : ಈ ಕೆಳಕಂಡ ವ್ಯವಸ್ಥೆಗಳನ್ನೊಳಗೊಂಡ ಪ್ರತಿಯೊಂದು ಕೊಠಡಿಯನ್ನು ಅಡುಗೆ ಮನೆಯಂತೆ ಬಳಕೆ ಮಾಡಬಹುದು. ಅವುಗಳೆಂದರೆ (ಎ) ಅಡುಗೆ ಮನೆಯ ಒಟ್ಟು ವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ಒದಗಿಸಿದ ಹೊರತು, ಅಡುಗೆ ಮನೆಯ ಪಾತ್ರ ಸಾಮಾನುಗಳನ್ನು ತೊಳೆಯಲು ಬಳಸುವ ನೀರು ನೇರವಾಗಿ ಅಥವಾ ಸಿಂಕ್ ಮುಖಾಂತರ ಜಾಲರಿ ಹಾಗೂ ಬಲೆ ವಿನ್ಯಾಸವುಳ್ಳ ಸಂಪರ್ಕ ವ್ಯವಸ್ಥೆಯ ಮೂಲಕ ಹಾಯ್ದು ತ್ಯಾಜ್ಯದ ಕೊಳವೆ ಅಥವಾ ಗಲೀಜು ಗುಂಡಿಗೆ ಸೇರುವ ವ್ಯವಸ್ಥೆ. (ಬಿ) ನೀರಿಳಿಯದ ನೆಲಗಟ್ಟು ಮತ್ತು (ಸಿ) ಹೊಗೆ ಗೂಡು : ಹೊಗೆ ಗೂಡನ್ನು ಅದರ ಮೇಲ್ಭಾಗದ ಹೊರಮುಖವು ಕಟ್ಟಡದ ಯಾವುದೇ ಭಾಗಕ್ಕಿಂತ ಕಡೇ ಪಕ್ಷ 1.2 ಮೀ ಎತ್ತರವಿದ್ದು ಹೊಗೆ ಗೂಡಿನ 1.5 ಮೀ ಸಮತಲ ತ್ರಿಜ್ಯದ ವ್ಯಾಪ್ತಿಯನ್ನು ಹೊಂದಿರುವಂತೆ ನಿರ್ಮಾಣ ಮಾಡತಕ್ಕದ್ದು. (9) ಸ್ನಾನ ಗೃಹಗಳು ಮತ್ತು ವಾಟರ್ ಕ್ಲಾಸೆಟ್‌ಗಳು : (1) ಪ್ರತಿಯೊಂದು ಸ್ನಾನಗೃಹ ಅಥವಾ ವಾಟರ್ ಕ್ಲಾಸೆಟ್ (ಎ) ಅದರ ಗೋಡೆಗಳ ಪೈಕಿ ಕಡೇ ಪಕ್ಷ ಒಂದು ಗೋಡೆಯಲ್ಲಿದ್ದು ಹೊರಗಿನ ಗಾಳಿಗೆ ತೆರೆದಿರುವಂತಿರತಕ್ಕದ್ದು. (ಬಿ) ಜಲ ನಿರೋಧಕ ಮಹಡಿಯಾಗದ್ದ ಹೊರತು ಮತ್ತೊಂದು ಶೌಚಾಲಯ, ತೊಳೆಯುವ ಸ್ಥಳ, ಸ್ನಾನ ಅಥವಾ ತಾರಸಿಗೆ ಹೊರತಾದ ಯಾವುದೇ ಕೊಠಡಿಯ ಮೇಲ್ಭಾಗ ಅಥವಾ ಕೆಳಭಾಗದಲ್ಲಿ ನೇರವಾಗಿ ಇರತಕ್ಕದ್ದಲ್ಲ. (ಸಿ) ಜಲನಿರೋಧಕ ಹೀರಿಕೊಳ್ಳುವ ವಸ್ತುವಿನಿಂದ ಮಾಡಲಾದ ಎತ್ತರ ಜಾಗ ಅಥವಾ ಆಸನವನ್ನು ಹೊಂದಿರತಕ್ಕದ್ದು. (ಡಿ) ಗೋಡೆಗಳು ಮತ್ತು ಒಳಗೋಡೆಗಳಿಂದ ಸುತ್ತುವರಿಯಲ್ಪಟ್ಟಿರಬೇಕು ಮತ್ತು ಅಂಥ ಪ್ರತಿಯೊಂದು ಗೋಡೆ ಅಥವಾ ಒಳಗೋಡೆಯ ಮೇಲ್ಮೈಯನ್ನು ಒಪ್ಪಗೊಳಿಸಬೇಕು ಮತ್ತು ಅಂಥ ಒಂದು ಕೋಣೆಯ ನೆಲಹಾಸಿನ ಮೇಲೆ 1 ಮೀ ಗಿಂತ ಕಡಿಮೆ ಇರದ ಎತ್ತರವರೆಗೆ ನುಣುಪಾದ ನೀರಿಳಿಯದ ಸಾಮಗ್ರಿಯಿಂದ. (ಇ) ಸೂಕ್ತವಾದ ಗ್ರೇಡ್ ನಿಂದ ವರಾಂಡ ಅಥವಾ ಯಾವುದೇ ಇತರ ಕೊಠಡಿಗಭಿಮುಖವಾಗಿರದೆ ಚರಂಡಿಗಭಿಮುಖವಾಗಿರುವ ಇಳಿಜಾರುಳ್ಳ ನೀರಿಳಿಯದ ನೆಲಗಟ್ಟನ್ನು ಹಾಕಿಸಬೇಕು. (ಎಫ್) ವಾಟರ್ – ಕ್ಲಾಸೆಟ್‌ಗಳನ್ನು ಒಳಗೊಂಡಿರುವ ಯಾವುದೇ ಕೊಠಡಿಯನ್ನು ಶೌಚಕ್ಕೆ ಹೊರತಾದ ಯಾವುದೇ ಉದ್ದೇಶಕ್ಕಾಗಿ ಬಳಕೆ ಮಾಡತಕ್ಕದ್ದಲ್ಲ. ವಾಟರ್ – ಕ್ಲಾಸೆಟ್ ಅನ್ನು ಒಳಗೊಂಡಿರುವ ಪ್ರತಿಯೊಂದು ಕೊಠಡಿಯು ಅದರ ಪ್ರವೇಶದ್ವಾರವನ್ನು ಸಂಪೂರ್ಣವಾಗಿ ಮುಚ್ಚುವಂಥ ಬಾಗಿಲನ್ನು ಹೊಂದಿರತಕ್ಕದ್ದು. (10) ನಡಂತಸ್ತು : ಈ ಕೆಳಕಂಡವುಗಳನ್ನು ಒದಗಿಸಿರುವುದಕ್ಕೊಳಪಟ್ಟು ಕೊಠಡಿ ಅಥವಾ ಕಂಪಾರ್ಟ್‌ಮೆಂಟ್ ಮೇಲೆ ನಡಂತಸ್ತನ್ನು ನಿರ್ಮಿಸಲು ಅನುಮತಿಸಬಹುದಾಗಿದೆ. (ಎ) ಬೆಳಕು ಮತ್ತು ಗಾಳಿ ಒಳಬರುವುದಕ್ಕೆ ಸಂಬಂಧಿಸಿದಂತೆ ಲಿವಿಂಗ್ ರೂಂಗಳ ಮಾನದಂಡಗಳಿಗನುಸಾರವಾಗಿರುವುದು. (ಬಿ) ಅದರ ಮೇಲ್ಭಾಗ ಮತ್ತು ಕೆಳಭಾಗದಲ್ಲಿರುವ ಸ್ಥಳದ ಗಾಳಿ ಬೆಳಕಿನ ವ್ಯವಸ್ಥೆಗೆ ಯಾವುದೇ ಸಂದರ್ಭ ಸನ್ನಿವೇಶಗಳಲ್ಲೂ ಧಕ್ಕೆ ಬರದಂತೆ ನಿರ್ಮಿಸಿರುವುದು. (ಸಿ) ಅಂಥ ನಡಂಸ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಅಡುಗೆ ಮನೆಯಂತೆ ಬಳಗೆ ಮಾಡಿರುವುದನ್ನು ಮತ್ತು (ಇ) ಯಾವುದೇ ಸಂದರ್ಭದಲ್ಲೂ ನಡಂತಸ್ತನ್ನು ಗಾಳಿಬೆಳಕಾಡದ ಕಂಪಾರ್ಟ್‌ಗಳಾಗಿ ಬದಲಾಯಿಸಲು ಅನುವಾಗುವ ಹಾಗೆ ಮುಚ್ಚಿರಬಾರದು. (11) ಚಾವಣಿಗಳು : (ಎ) ಸರಿಯಾದ ಅಳತೆಯ ಸಾಕಷ್ಟು ಮಳೆ ನೀರಿನ ಪೈಪುಗಳ ಮೂಲಕ ಅಲ್ಲಿಂದ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿದುಹೋಗಲು ಅನುವಾಗುವಂತೆ ಕಟ್ಟಡದ ಚಾವಣಿಯನ್ನು ನಿರ್ಮಿಸಿರಬೇಕು. ಅಥವಾ ರೂಪಿಸಿರಬೇಕು. ಅಗತ್ಯವಿರುವಲ್ಲಿ ಮಳೆ ನೀರನ್ನು ಮರುಪೂರಣ ಗುಂಡಿಗೆ ಹರಿಸಲಾಗಿರುವುದನ್ನು ಅಥವಾ ಕಟ್ಟಡದ ಅಥವಾ ಅಕ್ಕಪಕ್ಕದ ಕಟ್ಟಡಗಳ ಗೋಡೆಗಳ ಅಥವಾ ತಳಪಾಯಗಳ ಯಾವುದೇ ಭಾಗದಲ್ಲಿ ಸೋರಿಕೆಯಾಗದಂತೆ ಅಥವಾ ನೆರೆಹೊರೆಯವರಿಗೆ ಅಥವಾ ದಾರಿಹೋಕರಿಗೆ ಕಿರಿಕಿರಿ ಉಂಟುಮಾಡದಂತೆ ಅಥವಾ ಅವರಿಗೆ ಅನಾನುಕೂಲವಾಗದಂತೆ ಕಟ್ಟಡದಿಂದ ಹೊರಹಾಕಿರುವುದನ್ನು ಖಚಿತಪಡಿಸುವ ಹಾಗೆ ಅವುಗಳನ್ನು ಜೋಡಿಸಿರಬೇಕು. ಸೇರಿಸಿರಬೇಕು ಮತ್ತು ಅಳವಡಿಸಿರಬೇಕು. (ಬಿ) ಪ್ರಾಧಿಕಾರವು ಮಳೆ ನೀರಿನ ಪೈಪುಗಳನ್ನು ಮಳೆ ನೀರು ಮರುಪೂರಣ ಗುಂಡಿಗೆ ಅಥವಾ ಪುರಸಭೆಯ ಸ್ವತ್ತಿಗೆ ಯಾವುದೇ ಹಾನಿಯಾಗದ ರೀತಿಯಲ್ಲಿ ಮಳೆ ನೀರಿನ ಪೈಪನ್ನು ರಸ್ತೆಯ ಗಟಾರಕ್ಕೆ ಸಂಪರ್ಕ ಕಲ್ಪಿಸುವುದಕ್ಕಾಗಿ ಸಾರ್ವಜನಿಕ ಪಾದಚಾರಿ ಮಾರ್ಗದ ಕೆಳಗಡೆ ಮುಚ್ಚಿಕೊಂಡಿರುವ ರೂಪದ ಕಾಲುವೆ ನಿರ್ಮಿಸುವ ಮೂಲಕ ಅಥವ ಇತರ ಯಾವುದೇ ಅನುಮೋದಿತ ವಿಧಾನ ಅಳವಡಿಸುವ ಮೂಲಕ ಚರಂಡಿ ಅಥವಾ ಒಳಚರಂಡಿ ವ್ಯವಸ್ಥೆಗೆ ಜೋಡಿಸಬಹುದಾಗಿದೆ. (ಸಿ) ಮಳೆ ನೀರು ಸಂಗ್ರಹಣೆಗಾಗಿ, ಕೊಳವೆಗಳನ್ನು ಕಟ್ಟಡಗಳ ಹೊರಗಿನ ಗೋಡೆಗಳು ಹೊರಗೆ ಅಳವಡಿಸತಕ್ಕದ್ದು ಅಥವಾ ಖಾಲಿ ಜಾಗದಲ್ಲಿ ಅಥವಾ ರಂಧ್ರ ಕೊರೆದು ಅಥವಾ ಹೊರಗೆ ನಿರ್ಮಿಸಿದ ಅಂಥ ಗುಂಡಿಗಳ ಅಥವಾ ಪ್ರಾಧಿಕಾರವು ಅನುಮೋದಿಸಬಹುದಾದಂತೆ ಅಂಥ ಇತರ ರೀತಿಯಲ್ಲಿ ಅಳವಡಿಸತಕ್ಕದ್ದು. (12) ಕೆಲವು ಸಂದರ್ಭಗಳಲ್ಲಿ ವಿಮಾನ ನಿಲ್ದಾಣದ ಒಪ್ಪಿಗೆ : ವಿಮಾನ ನಿಲ್ದಾಣದ ಉಲ್ಲೇಖಿತ ಕೇಂದ್ರದಿಂದ ಇಪ್ಪತ್ತು ಕಿಲೋಮೀಟರುಗಳ ಪರಿಧಿಯೊಳಗೆ ಬರುವ ಗ್ರಾಮ ಪಂಚಾಯಿತಿಯ ಯಾವುದೇ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಲಾದ ಕಟ್ಟಡಗಳ ಸಂಧರ್ಭದಲ್ಲಿ ಅಂಥ ಕಟ್ಟಡಗಳನ್ನು ನಿರ್ಮಿಸಲು ಅನುಮತಿ ಪಡೆಯುವುದಕ್ಕೆ ಮುಂಚೆ, ಸ್ಥಳೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಪೂರ್ವ ಸಮ್ಮತಿಯನ್ನು ಪಡೆಯತಕ್ಕದ್ದು. (13) ಈ ಲೈಸನ್ಸ್ ಈ ಲಾಗಾಯ್ತು 3 ವರ್ಷಗಳು ಜಾರಿಯಲ್ಲಿದ್ದು ನಂತರರದ್ದೆಂದು ಭಾವಿಸತಕ್ಕದ್ದು. (14) ಇದಕ್ಕೆ ವಿರೋಧವಾಗಿ ನಡೆದಲ್ಲಿ ಗ್ರಾಮಪಂಚಾಯ್ತಿ ನಿಬಂಧನೆ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. (15) ವಾಯಿದೆ ಬಡಾಯಿಸಿಕೊಳ್ಳಲು ಅಪ್ಪಣೆ ಪಡೆಯಬೇಕು.

ಪು.ತಿ.ನೋ. P.T.O

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ರಶೀದಿ

ಬಾಪೂಜಿ ಸೇವಾಕೇಂದ್ರ
ನಿಮ್ಮ ಅನುಕೂಲವೇ, ನಮ್ಮ ಆದ್ಯತೆ.

| | | | |
|---|---|---|---|
| ರಶೀದಿ ಸಂಖ್ಯೆ | : 01442/1502001029/23-24 | ದಿನಾಂಕ | : 1-Aug-2023 |
| ಜಿಲ್ಲೆ | : ಬೆಂಗಳೂರು | ತಾಲ್ಲೂಕು | : ಆನೇಕಲ್ |
| ಗ್ರಾಮ ಪಂಚಾಯತ್ | : ಹುಲಿಮಂಗಲ | ಗ್ರಾಮ | : KOPPA |
| ಪಾವತಿಸುವವರ ಹೆಸರು | : SREENIDHI DEVELOPERS | ಉಲ್ಲೇಖ ಸಂಖ್ಯೆ | : |
| ಪಾವತಿಸಿದ್ದ ರೀತಿ | : ಡಿ.ಡಿ | | |
| Txn./ಡಿ.ಡಿ ದಿನಾಂಕ | : 1-Aug-2023 | ಉಲ್ಲೇಖ/ಬೇಡಿಕೆ ಕರಡು ಸಂಖ್ಯೆ | : UTIBR52023080100350214 |
| ಹಣಕಾಸು ವರ್ಷದ | : 2023-2024 | ಪಾವತಿಸಿದ್ದ ದಿನಾಂಕ | : 1-Aug-2023 |

| ಕ್ರಮ ಸಂಖ್ಯೆ | ಸ್ವೀಕೃತಿ ವಿವರ | ಹಿಂದಿನ ಬಾಕಿ (ರೂ. ಗಳಲ್ಲಿ) | ಪ್ರಸ್ತುತ ಬೇಡಿಕೆ (ರೂ ಗಳಲ್ಲಿ) | ಒಟ್ಟು ಬೇಡಿಕೆ(ರೂ ಗಳಲ್ಲಿ) |
|---|---|---|---|---|
| 1 | ವಿವಿಧ ಆದಾಯ ಇತರರು | 0 | 262848 | 262848 |
| | | | ಒಟ್ಟು ಪಾವತಿಸುವ ಮೊಬಲಗು | 262848 |

ರೂಪಾಯಿಗಳು ಅಕ್ಷರಗಳಲ್ಲಿ : ಎರಡು ಲಕ್ಷ ಅರವತ್ತು ಎರಡು ಸಾವಿರ ಎಂಟು ನೂರು ನಲವತ್ತು ಎಂಟು ರೂಪಾಯಿಗಳು

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಹುಲಿಮಂಗಲ ಗ್ರಾಮ ಪಂಚಾಯಿತಿ

'ಇದು ಕಂಪ್ಯೂಟರ್ ರಚಿಸಿದ ದಾಖಲೆಯಾಗಿರುವುದರಿಂದ, ಸಹಿಯ ಅವಶ್ಯಕತೆ ಇರುವುದಿಲ್ಲ'

01/08/2023 15:23 "This being computer generated document,no signature is required."